ನಿಯಂತ್ರಣಕ್ಕೆ ಸಿಗುತ್ತಿಲ್ಲ. ಪಂಚರ್ ಆಗಿರಬಹುದಾ? ನಿಲ್ಲಿಸೋಣ ಅಂತ ಬ್ರೇಕ್ ಹಾಕಿದ... ರಭಸವಾಗಿ ಬಂದು ಬ್ರೇಕ್ ಹಾಕಿದ್ದರಿಂದ ಬೈಕ್ ಹಿಡಿತ ತಪ್ಪಿ ಕೆಳಕ್ಕೆ ಬಿತ್ತು. ಯಾರೋ ನೂಕಿದಂತೆ, ಗಾಡಿ ರಸ್ತೆಯ ಬದಿಯಲ್ಲಿದ್ದ ಸಣ್ಣ ಕೊರಕಲಿನಲ್ಲಿ ಬಿದ್ದಿತು. ರವಿ ನಿಧಾನವಾಗಿ ಮೈಕೈ ಕೊಡವಿಕೊಂಡು ಮೇಲೆದ್ದ. ಸುತ್ತಮುತ್ತಲೂ ಗಾಢವಾದ ಅಂಧಕಾರ.

ದೂರದಲ್ಲಿ ಮಾಳ್ಯಾ ಗ್ರಾಮದ ದೀಪಗಳು ಕಾಣುತ್ತಿದ್ದವು. 'ಸುಮಾರು ಎರಡು ಕಿ.ಮೀ ಇರಬಹುದೇನೋ... ನಡೆದೇ ಹೋಗಿ... ಅಲ್ಲಿ ಯಾರದ್ದಾದರೂ ಬೈಕ್ ಇಸಿದುಕೊಂಡು ಹೋಗೋಣ... ಈ ಬೈಕ್ ಇಲ್ಲಿಯೇ ಬಿದ್ದಿರಲಿ' ಎಂದುಕೊಳ್ಳುತ್ತಾ... ಬೈಕ್ ಎಲ್ಲಿ ಬಿದ್ದಿದೆ ಎಂದು ನೋಡಲು ಮೊಬೈಲ್‌ನಲ್ಲಿರುವ ಟಾರ್ಚ್ ಹಾಕಲೆಂದು ಜೇಬಿಗೆ ಕೈ ಹಾಕಿದ. ಜೇಬಿನಲ್ಲಿ ಫೋನ್ ಇರಲಿಲ್ಲ! 'ಬಿದ್ದಾಗ ಅದೂ ಎಲ್ಲಿಯೋ ಜಾರಿಕೊಂಡಿರಬೇಕು...' ಆಗ ನೆನಪಾಗಿದ್ದು, ಜನಗಳ ಆ ಮಾತುಗಳು: "ಮಾಳ್ಯದ ಹತ್ತಿರ ದೆವ್ವಗಳಿವೆ."

"ಈಗ ಏನು ಮಾಡುವುದು? ಮಾಳ್ಯಾ ತನಕ ನಡೆದೇ ಹೋಗುವುದು" ಅಂದುಕೊಂಡು ಹೆಜ್ಜೆ ಎತ್ತಿ ಇಡಲು ಪ್ರಯತ್ನಿಸಿದ. ಎಡಗಾಲು... ಕಳಕ್ ಎಂದಿತು... ಮುಂದೆ ಹೆಜ್ಜೆ ಇಡಲು ಆಗುತ್ತಾ ಇಲ್ಲ! ಯಾರೋ ಕಾಲಿಗೆ ದಪ್ಪದೊಂದು ಕಲ್ಲನ್ನು ಕಟ್ಟಿ ಬಿಟ್ಟ ಅನುಭವ.

"ಅಮ್ಮಾ..." ಎಂದು ಕೂಗಲು ಬಾಯಿ ತೆರೆದ... ಆಗ ಕಂಡಿದ್ದು ಒಂದು ಸಣ್ಣ ನೆರಳಿನಾಕೃತಿ! ದೂರದಿಂದ ಒಂದೊಂದೇ ಹೆಜ್ಜೆ ಇಡುತ್ತಾ ಬರುತ್ತಿದೆ ಆ ಆಕೃತಿ... ಒಂದೊಂದು ಹೆಜ್ಜೆ ಇಡುತ್ತಾ ಹತ್ತಿರ ಬರುತ್ತಿದ್ದಂತೆಯೇ ಬೀಸುತ್ತಿದ್ದ ಗಾಳಿ ಶಾಂತವಾಗುತ್ತಿದೆ.

'ಯಾರಿರಬಹುದು? ಇದೇ ಊರವನಾ? ಬೈಚಾಪುರದಿಂದ ಬರುತ್ತಿದ್ದಾರಾ? ಕತ್ತಲಲ್ಲಿ... ಬೆಳಕಿನ ಒಂದು ತುಣುಕೂ ಇಲ್ಲದೇ ಹೇಗೆ ನಡೆದು ಬರುತ್ತಿದ್ದಾರೆ? ನಾನು ಬಿದ್ದ ಶಬ್ದ ಕೇಳಿ ಬರುತ್ತಿದ್ದಾರಾ?' ನೂರಾರು ಯೋಚನೆಗಳು ಮಿಂಚಿನ ವೇಗದಲ್ಲಿ ಬಂದು ಹೋದವು ರವಿಯ ಮನಸ್ಸಿನಲ್ಲಿ.

"ಹಲೋ... ಯಾರದು?" ಕೂಗಿದ ರವಿ. ಆ ವ್ಯಕ್ತಿ ಉತ್ತರಿಸಲಿಲ್ಲ. ಬದಲಾಗಿ ಇನ್ನೂ ಹತ್ತಿರ ಬರತೊಡಗಿದ. ಅಲ್ಲಿಂದ ಓಡಲು ರವಿ ಪ್ರಯತ್ನಿಸಿದ. ಹೆಜ್ಜೆ ಎತ್ತಿಡಲೂ ಆಗಲಿಲ್ಲ.

"ಗುರು ರಾಘವೇಂದ್ರಾ ಕಾಪಾಡು..." ಎಂದು ಕೂಗಿದ. ಅವನ ಮಾತುಗಳು ಅವನಿಗೇ ಕೇಳಿಸಲಿಲ್ಲ. ಆ ಮಾತು ಮುಗಿಯುವುದರ ಒಳಗೆ ಆ ವ್ಯಕ್ತಿ ರವಿಯ ಪಕ್ಕದಲ್ಲಿ ಬಂದು ನಿಂತ. ಕತ್ತಲಿಗೆ ಕೊಂಚ ಹೊಂದಿಕೊಂಡ ಅವನ ಕಣ್ಣುಗಳು, ಆ ಮನುಷ್ಯಾಕೃತಿ ನೋಡಿ ಕೊಂಚ ನಿರಾಳವಾದವು.

"ಸಿಗರೇಟ್ ಪ್ಲೀಸ್..." ಅನ್ನುತ್ತಾ ತನ್ನ ಕೈ ಮುಂದೆ ಚಾಚಿದ ಆ ವ್ಯಕ್ತಿ. ಆ ಮಾತುಗಳನ್ನು ಕೇಳಿ ರವಿ ಮತ್ತಷ್ಟು ನಿರಾಳನಾದ. ಆಗ ನೆನಪಾಯಿತು, ಆ ಅಂಗಡಿಯಲ್ಲಿ ಸಿಗರೇಟ್ ಕೊಂಡಿದ್ದು.

'ಸದ್ಯ! ನನ್ನನ್ನು ಈ ರೀತಿಯ ಸಂದರ್ಭಗಳಿಂದ ಬಚಾವ್ ಮಾಡಲೆಂದೇ ಆ ಅಂಗಡಿಯವನಿಂದ ದೇವರು, ಹಾಗೆ ಹೇಳಿಸಿರಬೇಕು... ಅವನೇ ಕೇಳಿ ಕೊಟ್ಟಿದ್ದಲ್ಲವಾ ಸಿಗರೇಟ್ ಅನ್ನು.'

"ಇದೆ, ಆದರೆ ಲೈಟರ್ ಇಲ್ಲ..."

"ಪರವಾಗಿಲ್ಲ ಕೊಡಿ, ನನ್ನ ಹತ್ತಿರ ಇದೆ" ಎಂದ ಆ ವ್ಯಕ್ತಿ. ರವಿ ತನ್ನ ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು ಅದರಲ್ಲಿನ ಒಂದು ಸಿಗರೇಟ್ ತನ್ನ ಬಾಯಲ್ಲಿ ಇಟ್ಟುಕೊಂಡು ಇನ್ನೊಂದನ್ನು ಆ ವ್ಯಕ್ತಿಗೆ ಕೊಟ್ಟ. ಆ ವ್ಯಕ್ತಿ ಅಲ್ಲಿಯವರೆಗೂ ತನ್ನ ಒಂದು ಕೈ ಯನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದು, ಸಿಗರೇಟ್ ಅನ್ನು ಬಾಯಿಗೆ ಇಡುತ್ತಿದ್ದಂತೆಯೇ ಅದನ್ನು ಹೊರ ತೆಗೆದ. ಅವನ ಮುಂಗೈ ಹತ್ತಿ ಉರಿಯತೊಡಗಿತು! ಇಡೀ ಕೈಯೆಲ್ಲಾ ಬೆಂಕಿಯ ಕೆನ್ನಾಲಿಗೆ ಆವರಿಸಿತು. ಆ ವ್ಯಕ್ತಿಯ ಮೊಣಕೈ ತನಕ ಬೆಂಕಿ ಧಗಧಗನೆ ಉರಿಯತೊಡಗಿತು. ಭಯದಿಂದ ರವಿ ಎರಡು ಹೆಜ್ಜೆ ಹಿಂದಿಟ್ಟ.